ಕೋಲಾರ್, ತಾರೀಖು 12ನೆ ಆಗಸ್ಟು 1907.

ಬೌರಿಂಗಪೇಟೆ ತಾಲ್ಲೂಕ್ ತಂಗಡಿ ಮತ್ತು ಕಕ್ಕೆ ಜಕ್ಕೆಯನ್ನು 1908ನೆ ಜೂರ್ 30ರ ವರಿವಿಗೆ ರೂಢಿಸಿಕೊಳ್ಳುವ ಹಕ್ಕು ಪಡಿಯತಕ್ಕ ವಿಷಯದಲ್ಲಿ 1907ನೆ ಇಸವಿ ಆಗಸ್ಟು 22ನೆ ಮಂಗಳವಾರ 34ನೆ ನಂಬರ್ ಮೈಸೂರು ಗೆಜೆಟ್ಟಿನ 2ನೆ ಭಾಗದ 404ನೆ ನಂಬರ್ ಪೇಜಿನಲ್ಲಿ ಘಾಯಿಷ್ ಆಗಿರುವ ನೋಟಿಫಿಕೇಷ್ಗೆ ನಿಗಾ ಕೊಡಬೇಕು.

ಎಸ್. ಎ. ಬಾಪೂರಾವ್,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಕೋಲಾರ ಡಿಸ್ಟ್ರಿಕ್ಟ್.

ತಾರೀಖು 24ನೆ ಆಗಸ್ಟು 1907.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—1907-08ನೆ ಸಾಲಿನಲ್ಲಿ ಚಿತ್ರದುರ್ಗ ಡಿಸ್ಟ್ರಿಕ್ಟಿನ ಇದರಡಿಯಲ್ಲಿ ಕಂಡ ಸ್ಟೇಟ್ ಮತ್ತು ಮನ್ನಾ ಜಂಗಲಿಗಳಲ್ಲಿ ದೊರಿಯಬಹುದಾದ ಪಸಾರೆ ಜಿನಸಿ ಜಮಾವಣೆಯ ಹಕ್ಕು ಈ ಕೆಳಗೆ ನಮೂದಿರುವ ತಾರೀಖು ಮತ್ತು ಸ್ಥಳಗಳಲ್ಲಿ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಿಂದಾಗಲೀ, ಅವರಿಂದ ನೇಮಿಸಲ್ಪಡುವ ಇತರ ಆಫಿಸರಿಂದಾಗಲೀ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುತ್ತದೆ.

ಹರಾಜು ಆಯಾಯ ತಾರೀಖಿನ ಮಧ್ಯಾಹ್ನ 2 ಘಂಟೆಗೆ ಷುರು ಮಾಡಲ್ಪಡುವುದು.

ನಂಬರ್.	ರೇಂಜ್.	ಸ್ಟೇಟ್ ಮತ್ತು ರಿಜರ್ವ್ಡ್ ಫಾರೆಸ್ಟ್ಗಳ ಹೆಸರು.	ಹರಾಜು ಮಾಡತಕ್ಕ ಸ್ಥಳ.	ಹರಾಜು ತಾರೀಖು.
1	ಹೊಳಲ್ಕೆರೆ ...	ನೀರ್ಹೆಡ್ಡಿ ಸ್ಟೇಟ್ ಫಾರೆಸ್ಟ್ ...	ಹೊಳಲ್ಕೆರೆ ರೇಂಜ್ ಆಫೀಸ್.	14— 9—1907.
2		ಗರ್ಗಾ ಕಾವಲ್ ...		
3		ಜೇವಿನಹಳ್ಳಿ ರಿಜರ್ವ್ಡ್ ಫಾರೆಸ್ಟ್ ...		
4		ಮಲಿಬೆನ್ನೂರು ಸ್ಟೇಟ್ ಫಾರೆಸ್ಟ್ ...	ಹರಿಹರದ ಟ್ರಾವಲರ್ಸ್ ಬಂಗಲೊ.	16— 9—1907
5	ಮಾರೀಕಣಿವೆ ...	ದೇವರಗುಡ್ಡ ಸ್ಟೇಟ್ ಫಾರೆಸ್ಟ್ ...	ಹೊಸದುರ್ಗ ಟ್ರಾವಲರ್ಸ್ ಬಂಗಲೊ.	19— 9—1907
6		ಕುದುರೆಕಣಿವೆ ಡಿಟೋ ...		
7		ಜಾನಕಲ್ ಡಿಟೋ ...		
8		ಮಾರೀಕಣಿವೆ ಡಿಟೋ ...	ಮಾರೀಕಣಿವೆ ...	21— 9—1907
9		ಲಕ್ಕಿಹಳ್ಳಿ ಡಿಟೋ ...		
10		ಸ್ವರ್ಣಮುಖಿ ರಿಜರ್ವ್ಡ್ ಫಾರೆಸ್ಟ್ ...		
11	ಬೊಮ್ಮಗೊಂಡನಕೆರೆ.	ಕವುತಾ ಕಾವಲ್ ಸ್ಟೇಟ್ ಫಾರೆಸ್ಟ್ ...	ಬೊಮ್ಮಗೊಂಡನಕೆರೆ ಟ್ರಾವಲರ್ಸ್ ಬಂಗಲೊ.	24— 9—1907
12		ಹಿರಿ ಅಡವಿ ಡಿಟೋ ...	ಹಾನಗಲ್ ಡಿಟೋ ...	26— 9—1907
13		ಕೃಷ್ಣರಾಜಪುರ ಡಿಟೋ ...	ರಾಂಪುರದ ಟ್ರಾವಲರ್ಸ್ ಬಂಗಲೊ.	28— 9—1907.
14		ಸಂಜೀವರಾಯನಕೋಟೆ ಡಿಟೋ ...		
15		ಬಾಂಡ್ಯಾವಿ ಡಿಟೋ ...		
16		ರಂಗಯ್ಯನದುರ್ಗ ಡಿಟೋ ...	ಜಗಲೂರು ಮುಸ್ತಾಫರ ಬಂಗಲೊ.	1—10—1907
17		ಅಣಖೂರ್ ಡಿಟೋ ...		
18	ಜೋಗಿಮಟ್ಟಿ ...	ಜೋಗಿಮಟ್ಟಿ ಡಿಟೋ ...	ಚಿತ್ರದುರ್ಗ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸ್.	2—10—1907

ಜೆನಸಿಯ ತಪಶೀಲ್.

1. ಹುಣಸೇಹಂಣು, 2. ಹೊಂಗೇಬೀಜ, 3. ಕೀಗೇಕಾಯಿ, 4. ಗೋಂದು, 5. ಜೇನುತುಪ್ಪ, 6. ಜೇನುಮೇಣ, 7. ಕಪಿಲಾರಂಗು, 8. ಗೇರುಬೀಜ, 9. ಬ್ಯಾಲದಹಂಣು, 10. ಕುಲ್ಲುಹುವ್ವು, 11. ಚಾರಪೊಪ್ಪು, 12. ತಾರೇಕಾಯಿ, 13. ಚೆಲ್ಲತಬೀಜ, 14. ಅಂಟವಾಳದಕಾಯಿ, 15. ಕಾಡಹರಳು, 16. ಬೂರಗದಹತ್ತಿ, 17. ಕಿರಿ ಈಚಲು, 18. ಮಾಗಳಿ ಬೇರು, 19. ಸೊಗದೇಬೇರು, 20. ಹಿಪ್ಪೆಬೀಜ, 21. ಕೊಂಬುಗಳು, 22. ಅಳಿಲಕಾಯಿ, 23. ಲೇಬಿಹಂಣು, 24. ಸೀತಾಫಲ, 25. ಇಂಗ್ಲಾರ, 26. ನೀಲಿಬೀಜ.

1. ಚಡ ದರಖಾಸ್ತು ದಾರನು, ಹರಾಜು ಖೈದಾದ ಕೂಡ್ಲೆ ಒಟ್ಟು ಮೊಬಲಗಿನ ಪೈಕಿ ಕಾಲು ಹಿಸ್ಸೆಯನ್ನು ಪಾವತಿ ಮಾಡತಕ್ಕದ್ದು. ಈ ರೀತಿ ಪಾವತಿ ಮಾಡದೆ ತಪ್ಪಿದಲ್ಲಿ, ದುಸರಾ ಹರಾಜು ಮಾಡಲ್ಪಡುವದಲ್ಲದೆ ಸರ್ಕಾರಕ್ಕೆ ಉಂಟಾಗುವ ನಷ್ಟಕ್ಕೆ ಮೊದಲು ದರಖಾಸ್ತು ದಾರನನ್ನು ಗುರಿಮಾಡಲಾಗುತ್ತೆ. ಆದರೆ ಘಾಯಿದೆಗೆ ಈತನು ಭಾಗಿಯಾಗುವದಿಲ್ಲ.

2. ದರಖಾಸ್ತುದಾರನಿಗೆ ದರಖಾಸ್ತು ಮಂಜೂರಾದ ಸಂಗತಿಯನ್ನು ತಿಳಿಸಿದ ಬಂದು ವಾರದೊಳಗಾಗಿ ಆತನು ಬಾಕಿ ಆಗುವ ಎಲ್ಲಾ ಪೊಬಲಗನ್ನು ಪಾವತಿ ಮಾಡಬೇಕು. ಹಾಗೆ ಸದರಿ ಹಣವನ್ನು ಪಾವತಿ ಮಾಡದೆ ತಪ್ಪಿದಲ್ಲಿ ಪೊದಲು ಕೊಟ್ಟ ಕಾಲುಹಿಸ್ಸೆ ಹಣವನ್ನು ಸರಾ ರಕ್ಕೆ ದಂಡವಾಗಿ ಕೀರಿಸಿಕೊಳ್ಳುವದಲ್ಲದೆ ಇನ್ನು ಬಾಕಿ ವುಳಿಯುವ ಹಣವನ್ನು ರೆವಿನ್ಯೂ ಕಂದಾಯದಂತೆ ವಸೂಲ್ ಮಾಡಲಾಗುತ್ತೆ.

3. ಹರಾಜು ಮಾಡುವ ಆಫಿಸರು ಯಾವದೊಂದು ಕಾರಣವನ್ನು ತಿಳಿಸದೇ ದರಖಾಸ್ತನ್ನು ಅಂಗೀಕರಿಸುವುದಕ್ಕಾಗಲೀ ತಿರಸ್ಕರಿಸುವದಕ್ಕಾಗಲೀ ಸ್ವತಂತ್ರರಾಗಿ ಇರುವರು.

4. ಇಜಾರೆದಾರನು ಇನ್ನಾಂದಾರರ ಹಕ್ಕುಗಳಲ್ಲಿ ಪ್ರವೇಶಿಸಕೂಡದು.

5. ಇಜಾರೆದಾರನಾಗಲೀ ಅವನ ಆಳುಗಳೇ ಆಗಲಿ ಪಸಾರೆ ಜಿನಸು ಜಮಾವಣಿ ನಿವದಮೇಲೆ ಯಾವ ಗಿಡಗಳನ್ನಾಗಲೀ ನಾಶಪಡಿಸಕೂಡದು.

6. ಇಜಾರೆದಾರನು ತಾನು ಖರೀದಿಗೆ ಪಡದರುವ ಜಿನಸಿ ವಿನಃ ಇತರ ಯಾವ ಜಿನಸಿಯನ್ನೂ ಜಮಾಯಿಸಕೂಡದು.

7. ಇಜಾರೆದಾರನ ವಿಜಂಟಿಯಗಳಾಗಲೀ ಅವನ ಆಳುಗಳೇ ಆಗಲಿ ಜಮಾವಣೀ ಕಾಲದಲ್ಲಿ ಮಾಡಿದ ಕೃತ್ಯಕ್ಕೆ ಅವನನ್ನೇ ಗುರಿಪಡಿಸಲಾಗುತ್ತೆ.

8. ಇಜಾರೆದಾರನು 1908ನೆ ಇಸವಿ ಜನ್ ಆಖೈರು ವಳಗಾಗಿ ಎಲ್ಲಾ ಪಸಾರೆ ಜಿನಸೀಯನ್ನು ಸ್ಟೇಟ್ ಫಾರೆಸ್ಟು ಸರಹದ್ದಿನಿಂದ ಸಾಗಿಸಿಕೊಳ್ಳತಕ್ಕದ್ದು.

9. ಸ್ಟೇಟ್ ಫಾರೆಸ್ಟಿಗೆ ಇಜಾರೆದಾರನ ಅಥವಾ ಅವನ ಆಳುಗಳ ಅಶ್ರದ್ಧೆಯಿಂದ ಫಾರೆಸ್ಟಿಗೆ ಬೆಂಕಿ ಬಿತ್ತೆಂದು ಫಾರೆಸ್ಟು ಇಲಾಖೆಯವರಿಗೆ ತಿಳಿಯಬಂದಲ್ಲಿ ಈ ಅಕೃತ್ಯಕ್ಕೆ ಇಜಾರೆದಾರನನ್ನು ಗುರಿಪಡಿಸಲಾಗುತ್ತೆ.

10. ಇಜಾರೆದಾರನು ತನ್ನ ಕಂಟ್ರಾಕ್ಟು ಪರತ್ತುಗಳಿಗೆ ಬದ್ಧನಾಗಿರಲು ಖಾತರೀ ಬಗ್ಗೆ 50 ರೂಪಾಯಿಗಳನ್ನು ನಗದಾಗಿ ಠೇವಣಿ ಇಡಬೇಕು. ಷರತ್ತುಗಳ ಪೈಕಿ ಯಾವ ಭಾಗದಲ್ಲಿಯಾದರೂ ವಿರೋಧವಾಗಿ ನಡದದ್ದೇ ಆದರೆ ಖಾತರೀ ಮೊಬಲಗು ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುವದಲ್ಲದೆ ಇಜಾರೆಯು ಸಹ ರದ್ದು ಮಾಡಲ್ಪಡಲಾದೀತು - ಇಜಾರೆದಾರನು ಮೇಲ್ಕಂಡಮೇರೆಗೆ 50 ರೂಪಾಯಿಗಳನ್ನು ನಗದಾಗಿ ಠೇವಣಿ ಇಡದ ಪಕ್ಷದಲ್ಲಿ 100 ರೂಪಾಯಿಗಳ ಜಾಮೀನ್ ಕೊಡಬೇಕು.

ವೈ. ಸೀತಾರಾಮಯ್ಯ,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಚಿತ್ರದುರ್ಗ ಡಿಸ್ಟ್ರಿಕ್ಟ್.

ಬೆಂಗಳೂರು ಡಿಸ್ಟ್ರಿಕ್ಟು.

ತಾರೀಖು ನೆ ಜುಲೈ 1907.

ದೇವನಹಳ್ಳಿ ತಾಲ್ಲೂಕು ಕಸಬಾ ಹೋಬಳಿ ಜೋಡಿ ಮಲ್ಲೇನಹಳ್ಳಿ ಗ್ರಾಮವು ಸರಕಾರಕ್ಕೆ ಬರಬೇಕಾದ ಬಾಕೀಗೋಸ್ಕರ ಸದರಿ ಜೋಡಿ ಮಲ್ಲೇನಹಳ್ಳಿ ಗ್ರಾಮವನ್ನ ದೇವನಹಳ್ಳಿ ತಾಲ್ಲೂಕು ಕಛೇರಿಯಲ್ಲಿ 1907ನೆ ಇಸವಿ ಸೆಪ್ಟಂಬರ್ 18ನೆ ತಾರೀಖಿನ ದಿವಸ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿರುತ್ತೆ.

ಹೆಚ್ಚು ತಪಶೀಲ್ ಬಗ್ಗೆ 1907ನೆ ಇಸವಿ ಆಗಸ್ಟು 22ನೆ ಮಾರ್ಕಂ 34ನೆ ನಂಬರು ಮೈಸೂರು ಗೆಜೆಟ್ಟಿನ IIನೆ ಭಾಗದ 407, 408ನೆ ನಂಬರು ಪೇಜನ್ನ ನೋಡತಕ್ಕದ್ದು.

ತಾರೀಖು ನೆ ಜುಲೈ 1907.

ದೇವನಹಳ್ಳಿ ತಾಲ್ಲೂಕು ಜಾಲದ ಹೋಬಳಿ ಜೋಡಿ ಮರಳಕುಂಟೆ ಗ್ರಾಮವು ಸರ್ಕಾರಕ್ಕೆ ಬರಬೇಕಾದ ಬಾಕೀಗೋಸ್ಕರ ಸದರಿ ಮರಳಕುಂಟೆ ಗ್ರಾಮವನ್ನ ದೇವನಹಳ್ಳಿ ಕಛೇರಿಯಲ್ಲಿ 1907ನೆ ಇಸವಿ ಸೆಪ್ಟಂಬರು 2ನೆ ತಾರೀಖಿನ ದಿವಸ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿರುತ್ತೆ.

ಹೆಚ್ಚು ತಪಶೀಲ್ ಬಗ್ಗೆ 1907ನೆ ಇಸವಿ ಆಗಸ್ಟು 22ನೆ ಮಾರ್ಕಂ 34ನೆ ನಂಬರು ಮೈಸೂರು ಗೆಜೆಟ್ಟಿನ IIನೆ ಭಾಗದ 409ನೆ ನಂಬರು ಪೇಜನ್ನ ನೋಡತಕ್ಕದ್ದು.

ತಾರೀಖು ಜುಲೈ 1907.

ದೇವನಹಳ್ಳಿ ತಾಲ್ಲೂಕು ಜಾಲದ ಹೋಬಳಿ ಜೋಡಿ ನೆಲ್ಲಿಕುಂಟೆ ಗ್ರಾಮವು ಸರ್ಕಾರಕ್ಕೆ ಬರಬೇಕಾದ ಬಾಕಿಗೋಸ್ಕರವಾಗಿ ಸದರಿ ಗ್ರಾಮವನ್ನ 1907ನೆ ಇಸವಿ ಅಕ್ಟೋಬರು 5ನೆ ತಾರೀಖಿನ ದಿವಸ ದೇವನಹಳ್ಳಿ ತಾಲ್ಲೂಕು ಕಛೇರಿಯಲ್ಲಿ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿರುತ್ತೆ.

ಹೆಚ್ಚು ತಪಶೀಲ್ ಬಗ್ಗೆ 1907ನೆ ಇಸವಿ ಆಗಸ್ಟು 22ನೆ ಮಾರ್ಕಂ 34ನೆ ನಂಬರ್ ಮೈಸೂರು ಗೆಜೆಟ್ಟಿನ IIನೆ ಭಾಗದ 410ನೆ ನಂಬರು ಪೇಜನ್ನ ನೋಡತಕ್ಕದ್ದು.

ತಾರೀಖು ನೆ ಜುಲೈ 1907.

ದೇವನಹಳ್ಳಿ ತಾಲ್ಲೂಕು ಕಸಬಾ ಹೋಬಳಿ ಜೋಡಿ ಬೂದಿಹಾಳ್ ಗ್ರಾಮವು ಸರಕಾರಕ್ಕೆ ಬರಬೇಕಾದ ಬಾಕಿಗೋಸ್ಕರವಾಗಿ ಸದರಿ ಜೋಡಿ ಬೂದಿಹಾಳ್ ಗ್ರಾಮವನ್ನ ದೇವನಹಳ್ಳಿ ತಾಲ್ಲೂಕು ಕಛೇರಿಯಲ್ಲಿ 1907ನೆ ಇಸವಿ ಅಕ್ಟೋಬರ್ 26ನೆ ತಾರೀಖಿನ ದಿವಸ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿರುತ್ತೆ.

ಹೆಚ್ಚು ತಪಶೀಲು ಬಗ್ಗೆ 1907ನೆ ಇಸವಿ ಆಗಸ್ಟು 22ನೆ ಮಾರ್ಕಂ 34ನೆ ನಂಬರು ಮೈಸೂರು ಗೆಜೆಟ್ಟಿನ IIನೆ ಭಾಗದ 411ನೆ ನಂಬರು ಪೇಜನ್ನ ನೋಡತಕ್ಕದ್ದು.

ಡಿ. ದೇವರಾಜ ಅರಸ್,
ಡೆಪ್ಯುಟಿ ಕಮಿಷನರ್.